ಇ) ಬಳ್ಳಾರಿಯ ದಾನಶೀಲರು, ಕಟ್ಟಡ ನಿರ್ಮಿಸಲು ಹೆಚ್ಚಿನ ಹಣ ದಾನ ನೀಡಲು ಮುಂದೆ ಬಂದಿರುವುದು ಒಂದು ಸಂಗತಿಯೆ ?

ಈ) ಹಾಗಿದ್ದಲ್ಲಿ, ದಾನ ಸ್ವೀಕರಿಸುವುದಕ್ಕಾಗಿ ವಿಳಂಬವಾಗಿರುವುದಕ್ಕೆ ಕಾರಣಗಳೇನು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ಹೌದು.

ಆ) ಸಾರ್ವಜನಿಕ ಶಿಕ್ಷಣ ಇಲಾಖೆ, ಸರ್ಕಾರಿ ಕಿರಿಯ ಕಾಲೇಜಿಗೆ ಸೇರಿರುವ ನಿವೇಶನವನ್ನು ವರ್ಗಾಯಿಸಿದೆ. ನಕ್ಷೆ ಮತ್ತು ಅಂದಾಜು ಸ್ವೀಕರಿಸಿದ ನಂತರ ಕಟ್ಟಡ ನಿರ್ಮಿಸಲು ಸೂಕ್ತ ಕ್ರಮ ಜರುಗಿಸಲಾಗುವುದು.

ಇ) ಬಳ್ಳಾರಿ ವಾಸಿಗಳಾಗಿರುವ ಶ್ರೀ ಸತೀಶ್ ಚಂದ್ರ ಅಗರ್‌ವಾಲ್, ಇವರು ಬಳ್ಳಾರಿಯಲ್ಲಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಿಸಲು ಸುಮಾರು ರೂ. ೫ ಲಕ್ಷ ಹಣವನ್ನು ದಾನ ನೀಡಲು ಇಷ್ಟಪಟ್ಟಿದ್ದಾರೆ.

ಈ) ಈಗಾಗಲೇ ಈ ಬಗ್ಗೆ ಕಾಲೇಜು ಶಿಕ್ಷಣ ನಿರ್ದೇಶಕರಿಗೆ ಆದೇಶ ನೀಡಲ್ಪಟ್ಟಿದೆ.

ವಿಮಾನಂಗಾರಿಕೆ ಅಭಿವೃದ್ಧಿ.

೫೨೪. ಶ್ರೀ ಜಿ. ರಾಜೂಗೌಡ (ಹನೂರು).—ಮಾನ್ಯ ಬಂದರು ಹಾಗೂ ವಿಮಾನಂಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಯಾವ ಯಾವ ಜಿಲ್ಲಾ ಕೇಂದ್ರಗಳಲ್ಲಿ ವಿಮಾನ್ಯಾಲಯ ಆರಂಭವಾಗಿದೆ.

ಆ) ವಿಮಾನಂಗಾರಿಕೆಯಿಂದ ಸರ್ಕಾರಕ್ಕೆ ವರ್ಷಕ್ಕೆ ಎಷ್ಟು ರೂ.ಗಳ ವಿದೇಶಿ ವಿನಿಮಯ ದೊರಕುತ್ತದೆ.

ಇ) ೧೯೮೬-೮೭ನೇ ಸಾಲಿನಲ್ಲಿ ವಿಮಾನಿನ ಅಭಿವೃದ್ಧಿಗೆ ಕೇಂದ್ರ ಸರ್ಕಾರದಿಂದ ದೊರೆತಿರುವ ನೆರವಿನ ಹಣವೆಷ್ಟು ?

ಶ್ರೀ ಎಂ. ರಘುಪತಿ (ಬಂದರು ಮತ್ತು ವಿಮಾನಂಗಾರಿಕೆ ಸಚಿವರು).—

ಅ) ಬೆಂಗಳೂರು ಮತ್ತು ಬಿಜಾಪುರ.

ಆ) ರಾಜ್ಯದಿಂದ ವರ್ಷಕ್ಕೆ ಸರಾಸರಿ ೧೨೦೦ ಲಕ್ಷ ರೂ. ಪರ್ಯಂತದ ವಿಮಾನಂಗಾರಿಕೆ ಉತ್ಪನ್ನಗಳು ರಫ್ತಾಗುತ್ತಿದ್ದು, ಕೇಂದ್ರ ಸರ್ಕಾರಕ್ಕೆ ವಿದೇಶೀ ವಿನಿಮಯ ಗಳಿಕೆಯಾಗುತ್ತಿದೆ.

ಇ) ರೂ. ೩೬.೭೫ ಲಕ್ಷ.

ನೀರಾವರಿ ಅಭಿವೃದ್ಧಿಗಾಗಿ ಮಾಡಿದ ವೆಚ್ಚ.

೫೪೧. ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭-೮೮ನೇ ವರ್ಷದಲ್ಲಿ ರಾಜ್ಯದಲ್ಲಿರುವ ಭಾರಿ ಮಧ್ಯಮ ಹಾಗೂ ಸಣ್ಣ ನೀರಾವರಿ ಯೋಜನೆಗಳಿಗಾಗಿ ವೆಚ್ಚ ಮಾಡಲು ಉದ್ದೇಶಿಸಿದ್ದ ಮೊಬಲಗು ಎಷ್ಟು ?

ಆ) ೧೯೮೭ನೇ ಡಿಸೆಂಬರ್ ಕೊನೆಯವರೆಗೆ ವೆಚ್ಚ ಮಾಡಿರುವ ಮೊತ್ತವೆಷ್ಟು ?

ಇ) ಕಾವೇರಿ ಹಾಗೂ ಕೃಷ್ಣಾ ಜಲಾನಯನ ಪ್ರದೇಶಗಳಿಗೆ ಸಂಬಂಧಿಸಿದಂತೆ ಪ್ರತಿ ಯೋಜನೆಗಳಿಗೆ ಉದ್ದೇಶಿಸಿದ್ದ ಹಾಗೂ ವಿಚರ್ಚ ಮಾಡಲಾದ ಮೊತ್ತದ ವಿವರಗಳನ್ನು ಒದಗಿಸುವುದು?